<u>ಅಸಲು ದಾವಾ ಸಂಖ್ಯೆ- **05/2023**</u> ಪಿ.ಡಬ್ಲ್ಯೂ:- **1**

ದಿನಾಂಕಃ **10-06-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

ದಾವಾ ಆಸ್ತಿಯು ಮೂಲತಃ ನನ್ನ ತಂದೆಯ ತಾಯಿಯಾದ ಯಲ್ಲಮ್ಮರವರಿಗೆ ಸೇರಿದ್ದಾಗಿರುತ್ತದೆ. ದಾವಾ ಆಸ್ತಿಯು ಪೂರ್ವ-ಪಶ್ಚಿಮ 47 ಗಜ, ಉತ್ತರ-ದಕ್ಷಿಣ 10 ½ ಗಜ ಇರುತ್ತದೆ. ದಾವಾ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ ದಾರಿ, ಪಶ್ಚಿಮಕ್ಕೆ ಗಿಡ್ಡಪ್ಪರವರ ಮನೆ, ಉತ್ತರಕ್ಕೆ ಹನುಮಂತಪ್ಪನ ಮನೆ ಮತ್ತು ಕಣ, ದಕ್ಷಿಣಕ್ಕೆ ತಳವಾರ್ ಬೊಮ್ಮಣ್ಣರವರ ಮನೆ. ದಾವಾ ಆಸ್ತಿಯಲ್ಲಿ ಮನೆ ಮತ್ತು ಖಾಲಿ ಜಾಗ ಇರುತ್ತದೆ. ದಾವಾ ಆಸ್ತಿಯಲ್ಲಿ 60 ಅಡಿಯಲ್ಲಿ ಮನೆ ಇರುತ್ತದೆ. ನಮ್ಮ ಅಜ್ಜಿ ಯಲ್ಲಮ್ಮರವರು ದಾವಾ ಆಸ್ತಿಯನ್ನು ಖರೀದಿ ಮಾಡಿದ ಸಮಯದಲ್ಲಿ ಮನೆಯು ಸಹ ಇತ್ತು. ನಿಪಿ-1 ಕ್ರಯ ಪತ್ರದಲ್ಲಿ ಖಾಲಿ ನಿವೇಶನದ ಬಗ್ಗೆ ನಮೂದಾಗಿದೆ ವಿನಃ ಮನೆಯ ಬಗ್ಗೆ ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಪಿ-2 ಮತ್ತು 3 1959-60 ರ ಖಾತೆ ನಕಲಿನಲ್ಲಿ ಆಸ್ತಿ ನಂ.50 ಕರಿಯಪ್ಪ ಬಿನ್ ಕರಿಯಪ್ಪರವರ ಹೆಸರಿನಲ್ಲಿರುವ ಬಗ್ಗೆ ನಮೂದಾಗಿದೆ ಎಂದರೆ ಸರಿಯಲ್ಲ. ನಮ್ಮ ತಂದೆಯ ತಂದೆ ಮತ್ತು ಪ್ರತಿವಾದಿಯ ತಂದೆಯ ತಂದೆ ಅಣ್ಣ ತಮ್ಮಂದಿರು. ನಾನು ಮತ್ತು ಪ್ರತಿವಾದಿಗಳು ಮೂಲತಃ ಒಂದೇ ಕುಟುಂಬದವರು. ದಾವಾ ಆಸ್ತಿಯ ಪಕ್ಕದಲ್ಲಿ ಪ್ರತಿವಾದಿಗೆ ಸೇರಿದ ಮನೆ ಮತ್ತು ಖಾಲಿ ಜಾಗ ಇರುತ್ತದೆ. ನಮ್ಮ ಖಾಲಿ ಜಾಗ ಹಾಳಾಗುತ್ತದೆ ಎಂದು ಅವರಿಗೆ ನೋಡಿಕೊಳ್ಳಲು ನಮ್ಮ ತಂದೆ ಕರಿಯಪ್ಪರವರು ತಮ್ಮ ಜೀವಿತ ಕಾಲದಲ್ಲಿ ಬಿಟ್ಟುಕೊಟ್ಟಿರುತ್ತಾರೆ. ಆದರೆ ಪ್ರತಿವಾದಿಗಳು ಈಗ ನಮಗೆ ದಾವಾ ಆಸ್ತಿಯನ್ನು ಬಿಟ್ಟುಕೊಟ್ಟಿರುವುದಿಲ್ಲ. 2013 ನೇ ಸಾಲಿನಲ್ಲಿ ದಾವಾ ಆಸ್ತಿಯಲ್ಲಿ ದನುವಿನ ಮನೆಯನ್ನು ಕಟ್ಟಲು ಕಲ್ಲನ್ನು ಹಾಕಿ ಹೋಗಿದ್ದಾಗ ಪ್ರತಿವಾದಿಗಳು ಕಲ್ಲನ್ನು ತೆಗೆದು ಬೇರೆ

ಕಡೆ ಹಾಕಿರುತ್ತಾರೆ. ದಾವಾ ಆಸ್ತಿಯು 2012 ನೇ ಸಾಲಿನಲ್ಲಿ ನಮ್ಮ ಅಜ್ಜಿಯ ಹೆಸರಿನಲ್ಲಿ ಇರುವ ಬಗ್ಗೆ ನಮಗೆ ತಿಳಿದಿರುತ್ತದೆ. ಪ್ರತಿವಾದಿಗಳು ಸ್ವಾಧೀನದಲ್ಲಿ ಇರುವ ಬಗ್ಗೆ ನಮಗೆ 2012 ನೇ ಸಾಲಿನಲ್ಲಿ ತಿಳಿದಿರುತ್ತದೆ. ಅದಕ್ಕೂ ಪೂರ್ವದಲ್ಲಿ ಎಷ್ಟು ವರ್ಷ ಸ್ವಾಧೀನಲ್ಲಿದ್ದರು ಎಂದು ನನಗೆ ಗೊತ್ತಿಲ್ಲ. 1960 ನೇ ಸಾಲಿನಿಂದಲೂ ರುದ್ರಪ್ಪರವರು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದು ಅವರ ಮರಣದ ನಂತರ ಪ್ರತಿವಾದಿಗಳು ಇಲ್ಲಿಯವರೆಗೂ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ತಂದೆಯವರು ಚಿರದೋಣಿ ಗ್ರಾಮದಲ್ಲಿ ವಾಸವಾಗಿದ್ದೇವೆ. ಸಾಕ್ಷಿಗೆ ದಾವಾ ಆಸ್ತಿಯಲ್ಲಿ ನೀವು ಯಾವತ್ತೂ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸಾಕ್ಷಿಯು ಹಬ್ಬ ಹರಿದಿನಗಳಲ್ಲಿ ನಾನು ಹೋಗಿ ಬರುತ್ತಿದ್ದೆನು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಹತ್ತಿರ ಹಬ್ಬ ಮಾಡಲು ಹೋಗಿ ಈಗ್ಗೆ ಸುಮಾರು 20-25 ವರ್ಷಗಳಾಗಿವೆ. 25 ವರ್ಷಗಳ ಹಿಂದೆ ನಾನು ಹಬ್ಬ ಮಾಡಲು ಹೋದಾಗ ರುದ್ರಪ್ಪರವರು ವಾಸವಾಗಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಈಗ ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು ದೌರ್ಜನ್ಯದಿಂದ ಸ್ವಾಧೀನಾನುಭವದಲ್ಲಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ಯಲ್ಲಮ್ಮನ ಎಲ್ಲಾ ವಾರಸುದಾರರು ಈ ದಾವೆಯಲ್ಲಿ ಪಕ್ಷಗಾರರು ಆಗಿಲ್ಲದ ಕಾರಣ ಈ ದಾವೆಯನ್ನು ನಾನು ಏಕಾಂಗಿಯಾಗಿ ನಡೆಸಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮಂದುವರೆದು ನನಗೆ ನನ್ನ ಕುಟುಂಬದವರು ಈ ದಾವೆಯನ್ನು ನಡೆಸಲು ಒಪ್ಪಿಗೆಯನ್ನು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. 1960 ನೇ ಸಾಲಿನಿಂದಲೂ ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿದುದ್ದರಿಂದ ಈ ದಾವೆಯು ಕಾನೂನಿನ ಅಡಿಯಲ್ಲಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆಯನ್ನು ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಮತ್ತು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.